

# ಕಾವೇರಿ ಕಲಹದಲ್ಲಿ ಚಿಗುರಿದ ಪ್ರಾಧಿಕಾರ

**ತಮಿಳುನಾಡಿಗೆ ಕರ್ನಾಟಕದಿಂದ ಅಧಿಕೃತವಾಗಿಯಲ್ಲದೆ, ಅನಧಿಕೃತವಾಗಿಯೂ ಸಾಕಷ್ಟು ನೀರು ಹರಿಯುತ್ತದೆ. ಈ ಪರಿಸ್ಥಿತಿಯಲ್ಲಿ ಕಾವೇರಿ ನೀರಿನ ಪ್ರಾಧಿಕಾರ ಹುಟ್ಟುಹಾಕುವ ಅಗತ್ಯವಿರಲಿಲ್ಲ.**

**■ ಟಿ.ಎಂ. ಶಿವಶಂಕರ್**

**ಕಾ**ವೇರಿ ನೀರು ನಿರ್ವಹಣಾ ಮಂಡಳಿ ರಚನೆ ಮಾಡುವ ಬಗ್ಗೆ ಕರ್ನಾಟಕದಲ್ಲಿ ಭಾರಿ ವಿರೋಧ ವ್ಯಕ್ತವಾಗಿತ್ತು. ಆದರೂ ಆ ಪ್ರಾಧಿಕಾರವನ್ನು ಜೂನ್ 1ನೇ 2018ರಿಂದ ಅಸ್ತಿತ್ವಕ್ಕೆ ತರಲಾಗಿದೆ. ಒಂದು ವೇಳೆ ಈ ಮಂಡಳಿ ರೂಪುಗೊಂಡರೆ ತಾನು ನದಿಯ ಮೇಲಿನ ಹಕ್ಕನ್ನು ಕಳೆದುಕೊಂಡು ಸಂಕಷ್ಟಕ್ಕೆ ಗುರಿಯಾಗುತ್ತದೆ ಎಂದು ಕೇಂದ್ರಕ್ಕೆ ಕರ್ನಾಟಕ ಸರ್ಕಾರ ಸ್ಪಷ್ಟ ಪಡಿಸಿತ್ತು. ರಾಜ್ಯದ ತೀವ್ರ ವಿರೋಧದ ನಡುವೆ ಈ ರಾಜ್ಯದ ವಿವರಣೆ ಪಡೆಯದೆ ಮತ್ತೊಂದು ರಾಜ್ಯಕ್ಕೆ ಅನುಕೂಲ ಮಡಿಕೊಡುವ ನಿಟ್ಟಿನಲ್ಲಿ ದಿಢೀರನೆ ಪ್ರಾಧಿಕಾರದ ರಚನೆ ಆಗಿಹೋಗಿದೆ.

ಕಾವೇರಿ ನೀರಿನ ಹಂಚಿಕೆ ಬಗ್ಗೆ ತಕರಾರು ಉದ್ಭವವಾದಾಗಲೆಲ್ಲ ತಮಿಳುನಾಡಿಗೆ ನಿಗದಿಪಡಿಸಿದ ನೀರನ್ನು ಹೊರಚೆಲ್ಲಿ, ನಂತರವೇ ಕರ್ನಾಟಕದಲ್ಲಿ ಉಳಿಯುವ ನೀರಿಗೆ ಮಾತ್ರ ನಾವು ದನಿ ಎತ್ತುತ್ತಿದ್ದೇವೆ. ಆದರೆ ತಮಿಳುನಾಡು, ಕರ್ನಾಟಕಕ್ಕೆ ದಕ್ಕುವ ನೀರನ್ನು ಹೊರತುಪಡಿಸಿ ಇಡಿ ಕಾವೇರಿ ಜಲಸಂಪತ್ತನ್ನೆಲ್ಲ ಕಬಳಿಸುವ ವಾದವನ್ನೇ ನ್ಯಾಯಾಲಯದಲ್ಲಿ ಮಂಡಿಸುತ್ತಿತ್ತು. ಶತಮಾನಗಳ ಇತಿಹಾಸವುಳ್ಳ ಎರಡು ರಾಜ್ಯಗಳ ನಡುವಿನ ನೀರು ಸಮರಕ್ಕೆ ಇತಿಶ್ರೀ ಮರೀಚಿಕೆಯೇ ಆಗಿತ್ತು. ಕರ್ನಾಟಕಕ್ಕೆ ನ್ಯಾಯೋಚಿತ ತೀರ್ಮಾನಗಳು ಬಾರದ ಹಾಗೆ ತಮಿಳುನಾಡು ಸದಾ ಎಚ್ಚರಿಕೆ ವಹಿಸುತ್ತಿದ್ದುದು ಜನಜನಿತ. ನಮ್ಮ ರಾಜ್ಯದ ಅನುಕೂಲತೆಗೆ ಬರಬಹುದಾಗಿದ್ದಂತಹ ಎಲ್ಲ ತೀರ್ಪುಗಳನ್ನು ಸಾರಾಸಗಟಾಗಿ ತಮಿಳುನಾಡು ವಿರೋಧಿಸುತ್ತಲೇ ಬಂದಿದೆ.

ಇಂತಹ ಆಕ್ಷೇಪಣೆ, ಆಕ್ರಮಣ ಪರಂಪರೆಯನ್ನು ಬ್ರಿಟಿಷರು ತಮಿಳಿಗರಿಗೆ ಅರೆದು ಕುಡಿಸಿದ್ದಾರೆಂದರೆ, ಅದೇನು ಅತಿಶಯೋಕ್ತಿ ಅಲ್ಲವೇ ಅಲ್ಲ. ಕರ್ನಾಟಕ ರಾಜ್ಯ ಕಾವೇರಿ ನದಿಯನ್ನು ಜೀವನದಿ ಎಂದು ಸಂಬೋಧಿಸುತ್ತಿದ್ದರೆ, ಕಾವೇರಿ ಹುಟ್ಟಿಹರಿಯುತ್ತಿರುವುದೇ ತನಗೆಂದು ತಮಿಳುನಾಡು ಭಾವಿಸಿಬಿಟ್ಟಿದೆ. ಸುಪ್ರೀಂ ಕೋರ್ಟ್ ಇತ್ತೀಚೆಗೆ ಕಾವೇರಿ ನೀರಿನ ಕಲಹಕ್ಕೆ ಅಂತಿಮ ತೆರೆ ಎಳೆದಿದ್ದರೂ ನೀರಿಗಾಗಿ ತಮಿಳರ ಕ್ಯಾತೆ ತಪ್ಪಲೇ ಇಲ್ಲ. ಕೇಂದ್ರ ಸರ್ಕಾರದ ಮೇಲೆ ಅವರ ನಿರಂತರದ ಒತ್ತಡದ ಪರಿಣಾಮವೇ ಈ ನೀರು ನಿರ್ವಹಣಾ ಪ್ರಾಧಿಕಾರದ ರಚನೆಗೆ ನಾಂದಿಯಾಯಿತು.

ಕರ್ನಾಟಕ ರಾಜ್ಯ ವಿಧಾನಸಭೆ ಚುನಾವಣೆ ಸಮಯದಲ್ಲಿ ಸರ್ಕಾರದ ಆಡಳಿತಯಂತ್ರವೆಲ್ಲ ಸ್ಥಬ್ಧವಿರುವಾಗಲೇ ಸದ್ದುಗದ್ದಲವಿಲ್ಲದೆ ಪ್ರಾದಿಕಾರ ಹುಟ್ಟು ಪಡೆಯಿತು. ಕೇಂದ್ರ ಸರ್ಕಾರ ಒಮ್ಮೆಲೆ ತೆಗೆದುಕೊಂಡ ಈ ನಿರ್ಧಾರದ ಹಿಂದೆ ತಮಿಳುನಾಡಿನ ಮಹಾ ಚಿತಾವಣೆ ಇದೆ ಎಂಬುದು ಈ ರಾಜ್ಯಕ್ಕೆ ತಿಳಿಯದೆ ಏನಿಲ್ಲ. ತಮಿಳುನಾಡಿನ ಕಾವೇರಿ ಜಲಾನಯನದಲ್ಲಿನ ರೈತರಾರಿಗೂ ಕರ್ನಾಟಕ ರಾಜ್ಯದ ನೀರು ಅಗತ್ಯ ಇರುವುದೇ ಇಲ್ಲ. ಏಕೆಂದರೆ ಆ ರಾಜ್ಯದ ಜಲಾನಯನದಲ್ಲಿ ಮೇಲ್ಜಲ ಮತ್ತು ಅಂತರ್ಜಲ ಸಂಪತ್ತು ಹೇರಳವಾಗಿದೆ ಎಂದು ಸಮರ್ಥಿಸಲು ಅಲ್ಲಿಯ ವಸ್ತುಸ್ಥಿತಿಯೇ ಸಾಕು (ಯೂಎನ್‌ಡಿಪಿ ವರದಿ). ಹೀಗಿದ್ದರೂ ಅಲ್ಲಿಯ ಸರ್ಕಾರವೇ ಮುಂದೆ ನಿಂತು ಸಾರ್ವಜನಿಕರನ್ನು ಪ್ರಚೋದಿಸಿ ಗದ್ದಲ ನಡೆಸುತ್ತ ಕೇಂದ್ರ ಸರ್ಕಾರದ ಗಮನ ಸೆಳೆಯುವಲ್ಲಿ ಯಶಸ್ವಿಯಾಗುತ್ತಲೇ ಬಂದಿದೆ.

ಈ ಮಂಡಳಿಯ ರಚನೆಗೆ ಮುಂಚಿತವಾಗಿ ಸಂಸತ್ತಿನಲ್ಲಿ ಚರ್ಚೆ ನಡೆಸದೆ, ಕರ್ನಾಟಕದ ಆಕ್ಷೇಪಣೆ ಲೆಕ್ಕಿಸದೆ ಕೇಂದ್ರ ಸರ್ಕಾರ ದಿಢೀರನೆ ಪ್ರಾಧಿಕಾರದ ರಚನೆಗೆ ಅಧಿಸೂಚನೆ ಹೊರಡಿಸಿದ ಬಗ್ಗೆ ಕರ್ನಾಟಕ ತೀವ್ರವಾಗಿ ವಿರೋಧಿಸಿದೆ. ಗೆಜೆಟ್ ನೋಟಿಫಿಕೇಶನ್ ಹೊರಡಿಸುವ ಮುಂಚೆಯೇ ಅಧಿಸೂಚನೆ ಹೊರಡಿಸುವಲ್ಲಿ ಲೋಪದೋಷಗಳು ಎದ್ದುಕಾಣುತ್ತಿರುವುದರಿಂದ ಕಾನೂನು ಹೋರಾಟದ ಪ್ರಸ್ತಾಪವೂ ಆಗಿದೆ.

ಕಾವೇರಿ ನಿರ್ವಹಣಾ ಮಂಡಳಿ ಕೇಂದ್ರದ ಕೂಸು. ಆ ಸರ್ಕಾರದ ಆಡಳಿತದಲ್ಲಿ ತಮಿಳುನಾಡಿನ ಪಾರುಪತ್ಯವೇ ಹೆಚ್ಚು. ಏಕೆಂದರೆ ಅವರು ಸರ್ಕಾರದ ಆಡಳಿತದ ಒಂದು ಭಾಗ. ತಮಿಳುನಾಡಿನಲ್ಲಿ ಇರುವ ಮುಖ್ಯ ವಾದ ಎರಡು ಪಕ್ಷದಲ್ಲಿ ಯಾವುದೇ ಪಂಗಡದವರು ಬಹುಸಂಖ್ಯೆಯಲ್ಲಿ ಗೆದ್ದು ಬಂದರೂ ಆ ಸಂಸದರೆಲ್ಲ ಸ್ವಾರ್ಥ ಸಾಧನೆಗೆ ಸಾರಾಸಗಟಾಗಿ ಕೇಂದ್ರದಲ್ಲಿ ಆಳುವ ಪಕ್ಷದ